ಓಎಸ್ ನಂಃ 9/2017
ಪಿಡಬ್ಲೂಃ 2

**<u>ಸಾಕ್ಷಿಗೆ ದಿನಾಂಕ 30-01-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎ.ಜಿ.ಪಿ. (ಹೆಚ್ಚುವರಿ ಸರ್ಕಾರಿ ವಕೀಲರಿಂದ)</u>**

ನನ್ನ ಹೊಲದ ಸರ್ವೆ ನಂ 250 ಆಗಿರುತ್ತದೆ. ನನ್ನ ಹೊಲದ ಪೂರ್ವಕ್ಕೆ - ಮರಳಸಿದ್ದೇಶ್ವರ ದೇವಸ್ಥಾನ ಇದ್ದು, ಪಶ್ಚಿಮಕ್ಕೆ - ಸರಕಾರದ ಮುಖ್ಯ ರಸ್ತೆ, ಉತ್ತರಕ್ಕೆ - ರಸ್ತೆ, ದಕ್ಷಿಣಕ್ಕೆ - ವಿಶ್ವನಾಥ ಹೂಗಾರ ರವರ ಜಮೀನು ಇರುತ್ತದೆ. ನನಗೆ ವಾದಿಯ ಹೊಲದ ಚೆಕಬಂಧಿ ಗೊತ್ತಿರುತ್ತದೆ. ವಾದಿಯ ಹೊಲ ಸರ್ವೆ ನಂ. 251ರ ವಿಸ್ತೀರ್ಣ 2-00 ಎಕರೆ ಇರುತ್ತದೆ. ಸದರಿ ವಾದಿಯ ಹೊಲದ ಪೂರ್ವಕ್ಕೆ - ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರ ಜಮೀನು ಇದ್ದು ಅವರ ಹೆಸರು ನನಗೆ ಗೊತ್ತಿರುವುದಿಲ್ಲ, ಪಶ್ಚಿಮಕ್ಕೆ - ಲಕ್ಷ್ಮಣ ಬಡ್ಡ ರವರ ಜಮೀನು, ಉತ್ತರಕ್ಕೆ - ರಸ್ತೆ ಇದ್ದು, ದಕ್ಷಿಣಕ್ಕೆ - ವಿಠಲ ರಾಠೋಡ್ ರವರ ಜಮೀನು ಇರುತ್ತದೆ.

ದಾವಾ ಆಸ್ತಿಯು ಮೊದಲು ಮಲ್ಲಪ್ಪ ತಂದೆ ಸಾಹೇಬಣ್ಣಾ ಇವರ ಹೆಸರಿನಲ್ಲಿತ್ತು. ಬಸಣ್ಣ ತಂದೆ ತಿಪ್ಪಣ್ಣ ಈತನು ದಾವಾ ಆಸ್ತಿಯನ್ನು ಮಲ್ಲಪ್ಪ ತಂದೆ ಸಾಹೇಬಣ್ಣಾ ಇವರ ಕಡೆಯಿಂದ ಸುಮಾರು 50 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾನೆ.

ನಾನು ದಾವಾ ಆಸ್ತಿಯನ್ನು ಬಸಣ್ಣ ತಂದೆ ತಿಪ್ಪಣ್ಣ ಈತನು ಮಲ್ಲಪ್ಪ ತಂದೆ ಸಾಹೇಬಣ್ಣಾ ಇವರ ಕಡೆಯಿಂದ ಖರೀದಿ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರವು ಬಸಣ್ಣ ತಂದೆ ತಿಪ್ಪಣ್ಣ ಈತನ ಕಡೆಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೊರಾರ್ಜಿ ಶಾಲೆ ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಗೆ ತನ್ನ ಹಿರಿಯ ಕಡೆಯಿಂದ ಬಂದ ಆಸ್ತಿಯಾಗಿದ್ದು, ದಾವಾ ಆಸ್ತಿಯ ಕಬ್ಜೆಯನ್ನು ವಾದಿಯೇ ಹೊಂದಿರುತ್ತಾನೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.